ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಚೇರಿ,
ಮಡಿಕೇರಿ ವಿಭಾಗ
OFFICE OF THE
DEPUTY CONSERVATOR OF FORESTS,
MADIKERI DIVISION

ಕರ್ನಾಟಕ ರಾಜ್ಯ ಸರ್ಕಾರ
Government of Karnataka

ಅರಣ್ಯ ಭವನ, ಮೈಸೂರು ರಸ್ತೆ,
ಮಡಿಕೇರಿ, ಕೊಡಗು ಜಿಲ್ಲೆ
ARANYA BHAVAN, MYSORE ROAD,
MADIKERI, KODAGU DISTRICT
e-mail: dcfmadikerit@gmail.com
Ph: 08272-228305

**ಸಂಖ್ಯೆ: ಎ3/ಭೂಮಿ/ಸಿಆರ್-96/24-25** **ದಿನಾಂಕ : 28/08/2025**

ರವರಿಗೆ:

ಅರಣ್ಯ ಸಂರಕ್ಷಣಾಧಿಕಾರಿ
ಕೊಡಗು ವೃತ್ತ, ಮಡಿಕೇರಿ

ವಿಷಯ : Renewal of Forest Lease of 0.4 ha Forest land in Kodamburu Village Sy No 128, Madikeri Taluk, for existing 33 KV Murnad Power Sub-Station regarding

ಉಲ್ಲೇಖ :
1) ಈ ಕಚೇರಿ ಪತ್ರ ಸಮಸಂಖ್ಯೆ: ದಿನಾಂಕ: 05/03/2025
2) ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿ, ಬೆಂಗಳೂರು, ರವರ ಕಚೇರಿ ಪತ್ರ ಸಂಖ್ಯೆ: KFD/HOFF/A5-6/(GFL)/13/2019-FC, ದಿ: 21/07/2025
3) ತಮ್ಮ ಕಚೇರಿ ಪತ್ರ ಸಂಖ್ಯೆ: KFD/HOFF/A5-6/(GFL)/13/2019-FC, ದಿ: 21/07/2025
4) ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಕಾರ್ಯ ಮತ್ತು ಪಾಲನೆ ವಿಭಾಗ, ಚಾ.ವಿ.ಸ.ನಿ.ನಿ, ಮಡಿಕೇರಿ ರವರ ಪತ್ರ ಸಂಖ್ಯೆ: EE(Ele)/AEE(O)/AE(T)/2025-26, ದಿನಾಂಕ:

>>>>>> OOO <<<<<<

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಪೋಸಲ್ ಸಂಖ್ಯೆ: FP/KA Others 21113/2016 (Form B) ಗೆ ಸಂಬಂಧಿಸಿದಂತೆ ಮೂರ್ನಾಡು ವಿದ್ಯುತ್ ವಿತರಣಾ ಕೇಂದ್ರದ ಜಾಗ, ಕೊಡಂಬೂರು ಗ್ರಾಮದ ಸರ್ವೆ ನಂಬರ್ 128 ರಲ್ಲಿನ 0.40 ಹೆಕ್ಟೇರ್ ಅರಣ್ಯ ಭೂಮಿಯ ಗುತ್ತಿಗೆ ಅವಧಿಯನ್ನು ಪರಿಷ್ಕರಿಸಿ ಮಂಜೂರಾತಿ ನೀಡುವ ಕುರಿತಂತೆ Deputy Inspector General of Forest (Central) Bengaluru ಇವರ ಪತ್ರದಲ್ಲಿ ತಿಳಿಸಲಾಗಿರುವ 4 ಅಂಶಗಳ ಕುರಿತಂತೆ 01 ರಿಂದ 03 ಅಂಶಗಳಿಗೆ ಉಪಯೋಗಿ ಸಂಸ್ಥೆಯವರಿಂದ ಮಾಹಿತಿಯನ್ನು ಪಡೆದುಕೊಂಡು ಮತ್ತು 04 ನೇ ಅಂಶಕ್ಕೆ ಈ ಕಚೇರಿಯಿಂದ ಮಾಹಿತಿಯನ್ನು ಕ್ರೋಢೀಕರಿಸಿ ಉಲ್ಲೇಖ(1) ರ ಪತ್ರದಲ್ಲಿ ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ನೋಡಲ್ ಅಧಿಕಾರಿ) ಅರಣ್ಯ ಸಂರಕ್ಷಣೆ, ಅರಣ್ಯ ಭವನ, ಬೆಂಗಳೂರು ಇವರಿಗೆ ಸಲ್ಲಿಸಲಾಗಿರುತ್ತದೆ.

ಮುಂದುವರೆದು, ಉಲ್ಲೇಖ(2) ರ ಪತ್ರದಲ್ಲಿ ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿ, ಬೆಂಗಳೂರು ಇವರು ಸದ್ರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಅಂಶ-2, ಅಂಶ-3 ಹಾಗೂ ಅಂಶ-4 ಕ್ಕೆ ಹೆಚ್ಚುವರಿ ಸಮರ್ಪಕ ಮಾಹಿತಿ ಸಲ್ಲಿಸುವಂತೆ ಸೂಚಿಸಿರುತ್ತಾರೆ. ಅದರಂತೆ ಸದ್ರಿ ಅಂಶ-2 ಹಾಗೂ ಅಂಶ-3 ಕ್ಕೆ ಉಪಯೋಗಿ ಸಂಸ್ಥೆಯವರಿಂದ ಅಗತ್ಯ ಮಾಹಿತಿಯನ್ನು ಉಲ್ಲೇಖ(4) ರಲ್ಲಿ ಈ ಕಚೇರಿಯಲ್ಲಿ ಪಡೆಯಲಾಗಿರುತ್ತದೆ. ಅಂಶ-4 ಕ್ಕೆ ಸಂಬಂಧಿಸಿದಂತೆ ಈ ಕೆಳಗಿನಂತೆ ಮಾಹಿತಿ ಹಾಗೂ ವಿವರಣೆಯನ್ನು ಸಲ್ಲಿಸಲಾಗಿದೆ.

ಉಪಯೋಗಿ ಸಂಸ್ಥೆಯವರು, ಉಲ್ಲೇಖ(4) ರಲ್ಲಿ ನೀಡಲಾದ ವಿವರಣೆಯನ್ನು ಪರಿಶೀಲಿಸಲಾಗಿ, ಮಡಿಕೇರಿ ತಾಲೂಕು, ಕೊಡಂಬೂರು ಗ್ರಾಮದ ಮೂರ್ನಾಡು ವಿದ್ಯುತ್ ವಿತರಣಾ ಕೇಂದ್ರದ ಜಾಗ, ಸರ್ವೆ ನಂಬರ್ 128 ರಲ್ಲಿನ 0.40 ಹೆಕ್ಟೇರ್ ಪ್ರದೇಶದಲ್ಲಿ ಸ್ಥಾಪಿತವಾಗಿರುವ ವಿದ್ಯುತ್ ವಿತರಣಾ ಕೇಂದ್ರದ ಗುತ್ತಿಗೆ ಅವಧಿಯು ದಿನಾಂಕ 28/11/2006 ಕ್ಕೆ ಮುಕ್ತಾಯಗೊಂಡಿದ್ದು, ಉಪಯೋಗಿ ಸಂಸ್ಥೆಯವರು 04/09/2012 ರಲ್ಲಿ ಗುತ್ತಿಗೆ ಅವಧಿ

ನವೀಕರಿಸುವ ಸಂಬಂಧ ಪ್ರಸ್ತಾವನೆಯನ್ನು ಈ ಕಚೇರಿಗೆ ಸಲ್ಲಿಸಿರುತ್ತಾರೆ. ಗುತ್ತಿಗೆ ಅವಧಿಯ ನವೀಕರಣ ಸಂಬಂಧ ಸೂಕ್ತ ಪ್ರಸ್ತಾವನೆಯನ್ನು ಪರಿವೇಶ್ ಪೋರ್ಟಲ್‌ನ ಮುಖಾಂತರ ಸಲ್ಲಿಸಿರುತ್ತಾರೆ ಹಾಗೂ ಆ ಸಂಬಂಧ ಪಾವತಿಸಲು ಬಾಕಿ ಇದ್ದ ಗುತ್ತಿಗೆ ಮೊತ್ತ ರೂ 12236/- ಅನ್ನು (ರಶೀತಿ ಸಂಖ್ಯೆ: 470993, ದಿ: 24/02/2014) ಹಾಗೂ ಗುತ್ತಿಗೆ ನವೀಕರನ ಶುಲ್ಕ ರೂ 6125/- ಅನ್ನು ಈ ಕಚೇರಿಗೆ ಪಾವತಿಸಿರುತ್ತಾರೆ. (ರಶೀತಿ ಸಂಖ್ಯೆ: 853558, ದಿ: 23/04/2020)

ಮುಂದುವರೆದು, ನಾನು ದಿನಾಂಕ : 22/08/2025 ರಂದು ಸದ್ರಿ ಸ್ಥಳಕ್ಕೆ ಬೇಟಿ ನೀಡಿ ಸ್ಥಳ ಪರಿಶೀಲಿಸಲಾಗಿ, ಸದ್ರಿ ವಿದ್ಯುತ್ ವಿತರಣಾ ಕೇಂದ್ರವು 1998 ರಲ್ಲಿ ಸ್ಥಾಪಿತವಾಗಿದ್ದು, ಮಂಜೂರು ಮಾಡಲಾದ 0.40 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಪ್ರಸ್ತುತ ಯಾವುದೇ ಮರಗಳು ಇರುವುದಿಲ್ಲ.

ಸದ್ರಿ 0.40 ಹೆಕ್ಟೇರ್ ಅರಣ್ಯ ಪ್ರದೇಶವನ್ನು 2006 ಕ್ಕೂ ಹಿಂದಿನ ಅವಧಿಯಿಂದಲೂ ಸರ್ಕಾರದಿಂದ ಗುತ್ತಿಗೆ ಪಡೆದಿದ್ದು, ಸದ್ರಿ ಅವಧಿಯಲ್ಲಿಯೇ, ಸರ್ಕಾರದಿಂದ ನೀಡಲಾದ ಗುತ್ತಿಗೆ ಅನುಮತಿಯಂತೆ 33 ಕೆವಿ ವಿದ್ಯುತ್ ಉಪಕೇಂದ್ರದ ಕಟ್ಟಡ ನಿರ್ಮಿಸಿ ಕಾರ್ಯ ನಿರ್ವಹಿಸಲಾಗುತ್ತಿದೆ.

ಮಡಿಕೇರಿ ತಾಲೂಕು ಬೆಟ್ಟ ಗುಡ್ಡಗಳಿಂದ ಕೂಡಿದ ಪ್ರದೇಶವಾಗಿದ್ದು, ಸದ್ರಿ ವಿದ್ಯುತ್ ಕೇಂದ್ರದಿಂದ, ಮಡಿಕೇರಿ ತಾಲೂಕಿನ ವಿವಿಧ ಗ್ರಾಮಗಳಾದ, ನಾಪೋಕ್ಲು, ಮೂರ್ನಾಡು, ಹೊದ್ದೂರು, ಕುಂಜಿಲ, ಕಕ್ಕಬೆ, ಬಲ್ಲಮಾವಟಿ, ಮರಗೋಡು, ಹೊಸಕೇರಿ, ಹಾಕತ್ತೂರು, ಎಮ್ಮೆಮಾಡು ಗ್ರಾಮ ಪಂಚಾಯಿತಿಗಳ ಹಲವಾರು ಗ್ರಾಮಗಳಿಗೆ ವಿದ್ಯುತ್ ಪೂರೈಕೆಯಾಗುತ್ತಿರುವುದಾಗಿದೆ. ಮಡಿಕೇರಿ ತಾಲೂಕಿನ ಎಲ್ಲಾ ರೀತಿಯ ವಿದ್ಯುತ್ ಅವಶ್ಯಕತೆಗಳು ಬಹುತೇಕ ಈ ಘಟಕದ ಮೇಲೆ ಅವಲಂಭಿತವಾಗಿರುತ್ತದೆ.

ಅದರಂತೆ ಮೇಲಿನ ವಿಷಯಗಳನ್ನು ಪರಿಗಣಿಸಿ, ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಕಾರ್ಯ ಮತ್ತು ಪಾಲನೆ ವಿಭಾಗ, ಚಾ.ವಿ.ಸ.ನಿ.ನಿ, ಮಡಿಕೇರಿ ಇವರ ಹೆಸರಿಗೆ ಮಂಜೂರಾಗಿರುವ ಮಡಿಕೇರಿ ತಾಲೂಕು, ಕೊಡಂಬೂರು ಗ್ರಾಮದ ಸರ್ವೇ ನಂಬರ್ 128 ರ 0.40 ಹೆಕ್ಟೇರ್ ಪ್ರದೇಶದಲ್ಲಿ ಸ್ಥಾಪಿತವಾಗಿರುವ 33/11ಕೆ.ವಿ. ವಿದ್ಯುತ್ ಪೂರೈಕೆ ಉಪಕೇಂದ್ರದ ಗುತ್ತಿಗೆ ಅವಧಿಯನ್ನು ನವೀಕರಿಸುವುದು ಅವಶ್ಯವಾಗಿರುತ್ತದೆ ಎಂಬ ಶಿಫಾರಸ್ಸಿನೊಂದಿಗೆ ಈ ಅಭಿಪ್ರಾಯ ವರದಿಯನ್ನು ತಮ್ಮ ಮುಂದಿನ ಕ್ರಮ ಹಾಗೂ ಅವಗಾಹನೆಗೆ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ

ಸಹಿ-
ಉಪ ಅರಣ್ಯ ಸಂರಕ್ಷಣಾಧಿಕಾರಿ
ಮಡಿಕೇರಿ ವಿಭಾಗ, ಮಡಿಕೇರಿ

ಪ್ರತಿಯನ್ನು ಗೌರವಗಳೊಂದಿಗೆ ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಕಾರ್ಯ ಮತ್ತು ಪಾಲನೆ ವಿಭಾಗ, ಚಾ.ವಿ.ಸ.ನಿ.ನಿ, ಮಡಿಕೇರಿ, ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ
ಮಡಿಕೇರಿ ವಿಭಾಗ, ಮಡಿಕೇರಿ

29/8/25